# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.05/2009-10 ದಿನಾಂಕ:06-11-2009

## -:: ವಾರ್ಷಿಕ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭೆ ನೀರು ಸರಬರಾಜು ವಿಭಾಗಕ್ಕೆ ಸಂಬಂಧಿಸಿದಂತೆ ನಗರಸಭಾ ನಿಧಿ ಹಾಗೂ ಇತರೆ ಸರ್ಕಾರದ ಅನುದಾನಗಳಿಗೆ 2009-10ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳಿಗೆ ನೀರುಸರಬರಾಜು ಸಾಮಗ್ರಿಗಳನ್ನು ಸರಬರಾಜು ಮಾಡಲು ವಾರ್ಷಿಕ ಟೆಂಡರ್ ಪ್ರಕಟಣೆ ನೀಡಿದ್ದು,ಅರ್ಹ ಅಧಿಕೃತ ಗುತ್ತಿಗೆದಾರರು/ಸರಬರಾಜುದಾರರಿಂದ ದ್ವಿಪ್ರತಿಯಲ್ಲಿ ಐಟಂವಾರು/ಶೇಕಡವಾರು ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ: 05-12-2009 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸುವ ದಿನಾಂಕ: 10-11-2009 ರಿಂದ 01-12-2009 ಸಾಯಂಕಾಲ 5.00ಗಂಟೆವರೆಗೆ
2. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ:12-11-2009 ರಿಂದ 03-12-2009 ಸಾಯಂಕಾಲ 5.00ಗಂಟೆವರೆಗೆ

| ಕ್ರ. ಸಂ. | ಕಾಮಗಾರಿ ಹೆಸರು | ಇ.ಎಂ.ಡಿ ಮೊತ್ತ ರೂ.ಗಳಲ್ಲಿ | ಟೆಂಡರ್ ಫಾರಂ ಬೆಲೆ ರೂ. ಗಳಲ್ಲಿ | ಕಾಲಾವಧಿ |
|---|---|---|---|---|
| 1 | ನೀರು ಸರಬರಾಜು ಸಾಮಗ್ರಿಗಳನ್ನು ಪೂರೈಸುವುದು. (ಷೆಡ್ಯೂಲ್.ಬಿ ನಲ್ಲಿ ನಮೂದಿಸಿರುವಂತೆ) | 30,000.00 | 1200+ತೆರಿಗೆ | 1 ವರ್ಷ |
| 2 | ನೀರು ಸರಬರಾಜು ವಿಭಾಗದ ಪೈಪ್‌ಲೈನ್ ಮಣ್ಣು ಅಗೆತ,ದುರಸ್ಥಿ ಮತ್ತು ಇತ್ಯಾದಿ ಕಾಮಗಾರಿ | | | |
| | ಅ) ವಾರ್ಡ್ ನಂ. 1 ರಿಂದ 15ರ ವರೆಗೆ | 6,250.00 | 500+ತೆರಿಗೆ | 1 ವರ್ಷ |
| | ಆ) ವಾರ್ಡ್ ನಂ.16 ರಿಂದ 31ರ ವರೆಗೆ | 6,250.00 | 500+ತೆರಿಗೆ | 1 ವರ್ಷ |
| 3 | ನೀರು ಸರಬರಾಜು ವಿಭಾಗದ ಕೊಳವೆ ಬಾವಿಗಳ ವಿವಿಧ ಪವರ್ ಪಂಪ್ಸ್, ಕಂಟ್ರೋಲ್ ಪ್ಯಾನಲ್ ಮತ್ತು ಇತ್ಯಾದಿ ರೆಪೇರಿ ಕೆಲಸ | 10,000.00 | 500+ತೆರಿಗೆ | 1 ವರ್ಷ |

ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ಡಿ.ಡಿ ಅಥವಾ ಕಛೇರಿಯಲ್ಲಿ ನಗದುಪಾವತಿಸಿದ ರಸೀದಿ ಹಾಗೂ ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದ ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2. ಪಿ.ಡಬ್ಲ್ಯೂ.ಡಿ 65(ಎ) ಮತ್ತು 66ರ ಷರತ್ತುಗಳನ್ನು ಪಾಲಿಸತಕ್ಕದ್ದು.
3. ಈ ಮೇಲಿನ ಕಾಮಗಾರಿಗಳಿಗೆ ಟೆಂಡರ್‌ದಾರರು ಕನಿಷ್ಠ 1ವರ್ಷ ಅದೇ ರೀತಿ ಕೆಲಸದಲ್ಲಿ ಅನುಭವವಿರಬೇಕು.
4. ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ,
6. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

ಅ) ಷರತ್ತುಗಳು ಕ್ರ.ಸಂ. 1ರ ಕಾಮಗಾರಿಗೆ

7. ಸರಬರಾಜು ಮಾಡುವ ಸಾಮಗ್ರಿಗಳು ಷೆಡ್ಯೂಲ್-ಬಿ ನಲ್ಲಿ ನಮೂದಿರುವ ಕಂಪನಿಗಳದ್ದೆ ಆಗಿರಬೇಕು, ಹಾಗೂ ಐ.ಎಸ್.ಐ. ಮುದ್ರಿಕೆ ಹೊಂದಿರಬೇಕು,
8. ಸರಬರಾಜು ಮಾಡುವ ಸಾಮಗ್ರಿಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು,(ವ್ಯಾಟ್ ಸೇರಿ)
9. ಸರಬರಾಜು ಮಾಡುವ ಸಾಮಗ್ರಿಗಳು ಸರಬರಾಜು ಮಾಡುವಾಗ ಹಾನಿಗೊಂಡಲ್ಲಿ ಬದಲಿ ಸಾಮಗ್ರಿಗಳನ್ನು ಕೊಡತಕ್ಕದ್ದು.
10. ಸಾಮಗ್ರಿಗಳನ್ನು ನಗರಸಭೆ ದಾಸ್ತಾನುವಿಗೆ ಸರಬರಾಜು ಮಾಡತಕ್ಕದ್ದು,
11. ಸಾಮಗ್ರಿಗಳನ್ನು ನಗರಸಭೆ ಅಗತ್ಯಕ್ಕೆ ತಕ್ಕಂತೆ ವಿಳಂಭ ಮಾಡದೇ ಸರಬರಾಜು ಮಾಡುವುದು.

**ಆ) ಷರತ್ತುಗಳು ಕ್ರ.ಸಂ.2ರ ಕಾಮಗಾರಿಗೆ**

12. ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆ ನೋಂದಾಯಿತ 3ನೇ ದರ್ಜೆ ಮೇಲ್ಪಟ್ಟು ಪರವಾನಗಿ ಹೊಂದಿರಬೇಕು,
13. ಪೈಪ್‌ಲೈನ್ ಮಣ್ಣು ಕಾಮಗಾರಿಯನ್ನು ಸಂಬಂಧಪಟ್ಟ ಅಭಿಯಂತರರು ಸೂಚಿಸುವ ರೀತಿಯಲ್ಲಿಯೇ ಮಾಡತಕ್ಕದ್ದು,
14. ಪೈಪ್‌ಲೈನ್ ಮಣ್ಣು ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ದೂರವಾಣಿ ಸಂಪರ್ಕದ ಕೇಬಲ್ ಹಾಗೂ ಇತರೆ ಆಸ್ತಿಪಾಸ್ತಿಗಳಿಗೆ ಹಾನಿಯಾದಲ್ಲಿ ನಗರಸಭೆಯು ಜವಾಬ್ದಾರಿಯಾಗಿರುವುದಿಲ್ಲ,
15. ಪೈಪ್ ಲೈನ್ ಮಣ್ಣು ಕಾಮಗಾರಿಯನ್ನು ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಪ್ರತಿ ಕಾಮಗಾರಿಯ ಪ್ರಾರಂಭ, ಪ್ರಗತಿ, ಮುಕ್ತಾಯದ ಹಂತದ ಪೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,
16. ಪೈಪ್ ಲೈನ್ ಮಣ್ಣು ಕಾಮಗಾರಿಗಳ ಎರಡು ಕೆಲಸಗಳ ಪೈಕಿ ಒಬ್ಬರಿಗೆ ಒಂದಕ್ಕೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

**ಇ) ಷರತ್ತುಗಳು ಕ್ರ.ಸಂ.3ರ ಕಾಮಗಾರಿಗೆ**

17. ಸಬ್ ಮರ್ಸಿಬಲ್ ಮೋಟಾರ್ ವೈಂಡಿಂಗ್ ಹಾಗೂ ಇಂಡೆಕ್ಷನ್ ಮೋಟಾರ್ ವೈಂಡಿಂಗ್ ಕಾಮಗಾರಿಗೆ ಮೂರು ತಿಂಗಳ ಸಾಮರ್ಥ್ಯದ ಅವಧಿ ನೀಡತಕ್ಕದ್ದು,
18. ರಿಪೇರಿ ಮಾಡುವ ಮೋಟಾರು ಪಂಪ್ ಹಾಗೂ ಸ್ಟಾರ್ಟರ್‌ಗಳಲ್ಲಿ ತೆಗೆದ ಹಾಳಾಗಿರುವ ಬಿಡಿಭಾಗಗಳನ್ನು ನಗರಸಭೆಗೆ ನೀಡುವುದು.
19. ಮೋಟಾರ್ ಪಂಪ್ ಸ್ಟಾರ್ಟರ್ ಹಾಗೂ ಇತರೆ ರಿಪೇರಿ ಕೆಲಸಗಳನ್ನು ಸಂಬಂಧಪಟ್ಟ ಅಭಿಯಂತರರ ಸಮ್ಮುಖದಲ್ಲೇ ಮಾಡತಕ್ಕದ್ದು.

| | | | |
|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- |
| **(ಮಲ್ಲಿಕಾರ್ಜುನ್)** | **(ಜಿ.ಎಸ್.ಸೋಮರುದ್ರಶರ್ಮ)** | **(ಡಿ.ಎಂ.ಚಂದ್ರಶೇಖರ್)** | **(ಎಸ್.ಪ್ರಭುದೇವ್ )**ಕೆ.ಎಂ.ಎ.ಎಸ್. |
| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿ ಸಮಿತಿ ಅಧ್ಯಕ್ಷರು | ಪೌರಾಯುಕ್ತರು |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ |

## “ನಕಲು ಪ್ರತಿ”

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**